# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**PW-1**

***Crl. Misc. 378/2022***

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣೀಕೃತ ಹೇಳಿಕೆ ಪಡೆದುಕೊಳ್ಳಲಾಯಿತು.
ದಿನಾಂಕ: 06-10-2025

| | |
|---|---|
| ಹೆಸರು | :- ಸವಿತಾ |
| ಗಂಡನ ಹೆಸರು | :- ಕುಮಾರ |
| ವಯಸ್ಸು | :- 38 ವರ್ಷ |
| ಉದ್ಯೋಗ | :- ಮನೆಗೆಲಸ |
| ವಾಸಸ್ಥಳ | :- ಚೌಡಪೂರ |

**ಮೌಖಿಕ ವಿಚಾರಣೆ ಃ-**

ನನ್ನದೂ ಎದುರುದಾರನೊಂದಿಗೆ 2006 ಇಸವಿಯಲ್ಲಿ ಮದುವೆಯಾಗಿರುತ್ತದೆ. ಆ ನಂತರ ಎದುರುದಾರನು ನನ್ನೊಂದಿಗೆ 4-5 ವರ್ಷ ಚೆನ್ನಾಗಿ ನೋಡಿಕೊಂಡಿರುತ್ತಾನೆ. ಆ ನಂತರ ನಾವು ಬಳ್ಳಾರಿಯಲ್ಲಿ ಮನೆ ಮಾಡಿರುತ್ತೆವೆ. ಅಲ್ಲಿ ಸಹ ನಾವು ಚೇನ್ನಾಗಿ ಇದ್ದೇವು ಆ ನಂತರ ಎದುರುದಾರನಿಗೆ ರಾಯಘಾಡ ಜಿಲ್ಲೆಗೆ ವರ್ಗಾವಾಗಿರುತ್ತದೆ. ಆ ನಂತರ ನನ್ನನ್ನೂ ಬಳ್ಳಾರಿ ಮನೆಯಲ್ಲಿ ಬಿಟ್ಟು ಅವರು ರಾಯಘಡಕ್ಕೆ ಹೋಗಿರುತ್ತಾರೆ. ಅಲ್ಲಿ ಬೇರೆ ಒಬ್ಬಳು ಸ್ತ್ರೀಯ ಪರಿಚಯವಾಗಿರುತ್ತದೆ. ಆದಾದ ಒಂದು ವರ್ಷದ ನಂತರ ನಮ್ಮನ್ನು ರಾಯಘಡಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಬೇರೆ ಸ್ತ್ರೀಯೊಂದಿಗೆ ಸಂಬಂಧ ಇರುವುದರಿಂದ ಎದುರುದಾರನು ನಮಗೆ ದಿನ ಹೊಡೆ ಬಡೆ ಮಾಡಿ ಕಿರುಕುಳ ಮಾಡಲು ಪ್ರಾರಂಭಿಸಿರುತ್ತಾನೆ. ಆ ನಂತರ ನಮ್ಮ ಇಬ್ಬರ ವೈಮನಸ್ಸಿನಿಂದ ನನ್ನ ಮಗ ತೀರಿಕೊಂಡಿರುತ್ತಾನೆ. ಆ ನಂತರ ಮರಳಿ ಊರಿಗೆ ಬಂದಿರುತ್ತೇವೆ ಎದುರುದರನ ಮತ್ತು ಆತನ ಕುಟುಂಬ ಸದಸ್ಯರು ಪರಿಚಯ ಆದ ಸ್ತ್ರೀ ನನಗೆ ಕಿರುಕುಳ ನೀಡಿ ಹೊಡೆ ಬಡೆ ಮಾಡಿರುತ್ತಾರೆ. ನಾನು ಎದುರುದಾರನ ಕುಟುಬಂದವರೊಂದಿಗೆ ಅಲ್ಲೇ ಉಳಿದಿದ್ದು ಆ ನಂತರ ಎದುರುದಾರನು ಪರಿಚಯವಾದ ಸ್ತ್ರೀಯೊಂದಿಗೆ ಬೇರೆ ಕಡೆ ಹೋಗಿರುತ್ತಾನೆ. ಆ ನಂತರ ನನ್ನ ಅತ್ತೆ ಮಾವ ನನಗೆ ಬಹಳ ಕಿರುಕುಳ ನೀಡಿರುತ್ತಾರೆ. ಅದಕ್ಕೆ ನಾನು ಮಹಿಳಾ ಮಂಡಳಿಯಲ್ಲಿ ದೂರು ನೀಡಿರುತ್ತೇನೆ. ಸದರಿಯವರನ್ನು ಕರೆಸಿ ನನಗೆ ಮತ್ತು ನನ್ನ ಮಕ್ಕಳಿಗೆ ಮಾಸಿಕ 30 ಸಾವಿರ ರೂಪಾಯಿ ಕೊಡಲು ತಿಳಿಸಿರುತ್ತಾರೆ ಅದರಂತೆ ಎದುರುದಾರನು

ಒಪ್ಪಿಕೊಂಡಿರುತ್ತಾನೆ. ಆ ನಂತರ ಎದುರುದಾರನು ಯಾವುತ್ತೂ ನನಗೆ ಜೀವನೋಪಚಾರಕ್ಕಾಗಿ ದುಡ್ಡು ನೀಡಿರುವುದಿಲ್ಲ. ಅದಕ್ಕಾಗಿ ನಾನು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ.

ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ ಅಫಜಲಪೂರವರು ನೀಡಿದ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ಈಗ ನಿಪಿ 1 ಎಂದು ಗುರುತಿಸಲಾಯಿತು.

ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ ಅಫಜಲಪೂರವರು ಅರ್ಜಿದಾರರು ನೀಡಿದ ದೂರಿನ ಧೃಢಿಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ಈಗ ನಿಪಿ 2 ಎಂದು ಗುರುತಿಸಲಾಯಿತು.

ಒಪ್ಪಿಗೆ ಕರಾರು ಪತ್ರದ ಧೃಢಿಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ಈಗ ನಿಪಿ 3 ಎಂದು ಗುರುತಿಸಲಾಯಿತು.

ಮತ್ತೊಂದು ಒಪ್ಪಿಗೆ ಕರಾರು ಪತ್ರದ ಧೃಢಿಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ಈಗ ನಿಪಿ 4 ಎಂದು ಗುರುತಿಸಲಾಯಿತು.

ಮದುವೆ ಭಾವ ಚಿತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 5 ಎಂದು ಗುರುತಿಸಲಾಯಿತು.

ಸಾಂತ್ವಂನ ಕೇಂದ್ರದಲ್ಲಿ ಎದುರುದಾರರು ಇರುವ ಭಾವ ಚಿತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 6 ಮತ್ತು 7 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಎದುರುದಾರರ ಪರ ಶ್ರೀ ಎ ಎಸ್ ಕೆ ವಕೀಲರಿಂದ</u>

ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು._

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ